Sri H. SIDDAVEERAPPA.—I cannot say. It is presumed. I will see that they are caused to be sent.

ಶ್ರೀ ಬಿ. ರಾಚಯ್ಯ.—ಅನೇಕಕಡೆ ಯಾವ ಪ್ರಾವಿಷ್ ಮೇಲೆ ಕೇಸ್ ಹಾಕಬೇಕೆಂದು ಗೊತ್ತಿಲ್ಲದೆ, ಪೋಲೀಸಿನವರು ಪಾರ್ಟಿಗಳನ್ನೇ ಯಾವ ಸೆಕ್ಷನ್ ಮೇಲೆ ಕೇಸ್ ಹಾಕಬೇಕೆಂದು ಕೇಳುತ್ತಿರುವುದು ಗೊತ್ತಿದೆಯೇ ?

Sri H. SIDDAVEERAPPA.—I will see that all copies relevant to the eradication of untouchability are supplied to all the Police Stations.

ಶ್ರೀ ಬಿ. ರಾಚಯ್ಯ.—ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಈ ರೀತಿಯಾಗಿ ಬಂದ ಕಂಪ್ಲೇಂಟುಗಳ ವಿಚಾರದಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಶಿಕ್ಷಣ ಕೊಡುತ್ತಿದ್ದೀರಾ ?

Sri H. SIDDAVEERAPPA.—I want notice. I have no idea.

ಶ್ರೀ ಎಂ. ಮಾದಯ್ಯ.—Untouchability ಆಕ್ಟಿನ ಪ್ರತಿಗಳನ್ನು ಪೋಲೀಸ್ ಆಫೀಸರುಗಳಿಗೆ ಕಳುಹಿಸುವಾಗ ಕನ್ನಡ ಮತ್ತು ಇಂಗ್ಲಿಷ್ ಎರಡು ಪ್ರತಿಗಳನ್ನೂ ಕಳುಹಿಸಬೇಕು. ಆ ರೀತಿ ಮಾಡಿದ್ದಾರೆಯೇ ?

Sri H. SIDDAVEERAPPA.—I will make both the copies available.

Sri K. S. VASAN.—Is it not desirable to entrust the administration of these Acts under a separate staff ?

Sri H. SIDDAVEERAPPA.—It is not found necessary.

Sri K. S. VASAN.—Is it not a fact that many of the Officers who are entrusted with the responsibility of administering these Acts are themselves practising untouchability ?

Sri H. SIDDAVEERAPPA.—If they do it, it is a matter for serious consideration.

Thefts in Chikmagalur District.

Q.—567. Sri G. PUTTASWAMY (Chikmagalur — Mudigere — Scheduled Castes).—

Will the Government be pleased to state:—

(*a*) the number of thefts that have occurred in Chikmagalur District for the past six months;

(*b*) of these, how many of them have been detected;

(*c*) of these, how many cases were launched; how many were convicted;

(*d*) the names of officers who detected the cases and the names of officers who were awarded the rewards ?

A.—Sri H. SIDDAVEERAPPA (Minister for Home).—

(*a*) 53.

(*b*) 38.

(*c*) 38 cases have been launched, of which 20 have already ended in conviction.

(*d*) Sriyuts K. M. A. Ravoof Khan, Police Inspector, Sub-Inspectors R. Siddoji Rao, K. M. Panduranga, Y. Srikantiah, S. M. Ranga Rao and C.P. Shivappa and Daffedar Thangaraj are the officers who detected the cases.

Daffedars U. K. Kariyappa, Krishna Iyengar and Thangaraj and Police Constables 281, 79, 99, 219, 256, 284, 214, 129 and 324 were awarded rewards.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದಿರುವ ಈ 53 ಕೇಸುಗಳಲ್ಲಿ ಯಾವ ಯಾವ ಪ್ರದೇಶದಲ್ಲಿ ಈ ಕಳ್ಳತನಗಳು ನಡೆದಿವೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರಗಳು ಇಲ್ಲಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಂದು ಉತ್ತರಕೊಟ್ಟಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು ಜಿಲ್ಲೆಯೆಂದರೆ ಟೌನ್ ಪ್ರದೇಶವೇ ? ಎಲ್ಲೆಲ್ಲಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಒಂದು ಕಳ್ಳತನಕ್ಕೂ ಇನ್ನೊಂದು ಕಳ್ಳತನಕ್ಕೂ ಅವಧಿ ಎಷ್ಟಿದೆಯೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಹೆಚ್ಚಿದುದು ಜುಲೈ 15ನೆಯ ತಾರೀಖಿನಿಂದ.

ಶ್ರೀ ಜಿ. ಪುಟ್ಟಸ್ವಾಮಿ.—ಜುಲೈ 15ನೆಯ ತಾರೀಖಿನಿಂದ ಕೇವಲ ಎಂಟೇ ದಿವಸಗಳಲ್ಲಿ 53 ಕಳ್ಳತನಗಳು ಒಬ್ಬರಿಂದಲೇ ನಡೆದಿವೆಯೆಂದು ಇಟ್ಟುಕೊಳ್ಳೋಣವೇ !

ಶ್ರೀ ಎಚ್. ಸಿದ್ದವೀರಪ್ಪ.—53 ಕೇಸುಗಳು ನಡೆದಿವೆಯೆಂದೇನೋ ಹೇಳಿದೆ. ಜುಲೈ 15ನೆಯ ತಾರೀಖಿನಿಂದ 2-3 ಗ್ಯಾಂಗುಗಳು ಕಾರ್ಯಾಚರಣೆ ಮಾಡಿದ್ದಾರೆ. ಮಿಂಚಿನ ವೇಗದಲ್ಲೇ ಕೆಲಸಗಳು ನಡೆದಿವೆ. ಇಬ್ಬರು ಮೂವರು ವಿದ್ಯಾರ್ಥಿಗಳು ಸೇರಿ ನಡೆಸಿದ ಈ ಕೇಸುಗಳು, ಬಾಕಿ 8-10 ಕೇಸುಗಳು—ಎಲ್ಲವೂ ಒಟ್ಟಿಗೆ ಸೇರಿ ಜಾಸ್ತಿ ಸಂಖ್ಯೆಯಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಳ್ಳತನಗಳ ಸ್ವಭಾವವನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಭಾವಗಳೆಲ್ಲಾ, ಬೀಗ ಮುರಿಯುವುದು, ಒಳಗೆ ಹೋಗಿ ಸಾಮಾನುಗಳನ್ನು ತೆಗೆದುಕೊಂಡು ಹೋಗುವುದು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಳ್ಳತನಗಳಲ್ಲಿ ಸ್ತ್ರೀಯರ ಮಾಂಗಲ್ಯಗಳನ್ನೂ ಅಪಹರಿಸಿರುವುದನ್ನು ನೀವು ಗಮನಿಸಿದ್ದೀರಾ ?

Sri H. SIDDAVEERAPPA.—I cannot say. House breaking, burglary, theft, etc., have taken place.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಚಾರ್ಜ್‌ಷೀಟ್ ಹಾಕಿರುವುದುಗಳ ಪೈಕಿ ಎಷ್ಟು ಸಂದರ್ಭಗಳಲ್ಲಿ ಸ್ತ್ರೀ

(ಶ್ರೀ ಜಿ. ಪುಟ್ಟಸ್ವಾಮಿ.)

ಯರ ಮಾಂಗಲ್ಯವನ್ನು ಕಳ್ಳತನಮಾಡಿರುವುದು ಸೇರಿದೆ ಯೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—53 ಕಳ್ಳತನಗಳು ನಡೆದಿರುವುದರಲ್ಲಿ 38 ಕಳ್ಳತನಗಳ ಸಂಬಂಧದಲ್ಲಿ ಈಗಾಗಲೇ ಮೊಕದ್ದಮೆಗಳನ್ನು ಹೂಡಲಾಗಿದೆ. ಅವುಗಳಲ್ಲಿ 20 ಕೇಸುಗಳು ಸಾಬೀತಾಗಿವೆಯೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಉಳಿದ ಕಳ್ಳತನಗಳು ಏನಾಗಿವೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವುಗಳ ವಿಷಯದಲ್ಲಿ ಕೋರ್ಟಿನಲ್ಲಿ ಇನ್ನೂ ವ್ಯವಹಾರ ನಡೆಯುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಕೋರ್ಟಿಗೆ ಹಾಕಿದ್ದಾರೆಂದು ಸರ್ಕಾರಕ್ಕೆ ಗೊತ್ತಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲೇ ಹೇಳಿದೆಯಲ್ಲಾ, 38 ಕೇಸುಗಳನ್ನು ಕೋರ್ಟುಗಳಲ್ಲಿ ದಾಖಲು ಮಾಡಲಾಗಿದೆಯೆಂದು.

ಶ್ರೀ ಜಿ. ಪುಟ್ಟಸ್ವಾಮಿ.—ಉಳಿದ ಕೇಸುಗಳು ಏನಾಗಿವೆ ?

ಶ್ರೀ ಎಚ್. ಸಿದ್ದವೀರಪ್ಪ.—ಬಹುಶಃ enquiry ಯಲ್ಲಿ ಇರಬೇಕು. ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಪೋಲೀಸ್ ಆಫೀಸರುಗಳಿಗೆ ಬಹುಮಾನ ಕೊಡಲಾಗಿದೆಯೆಂದು ಹೇಳಿದ್ದೀರಲ್ಲಾ, ಯಾರಾರಿಗೆ ಎಷ್ಟೆಷ್ಟು ಬಹುಮಾನ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಆ ತಪಶೀಲುಗಳು ನನ್ನಲ್ಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—(*d*) ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ ಬಹುಮಾನಗಳನ್ನು ಕೆಳ ನೌಕರರಾದ ದಫೇದಾರರುಗಳು, ಕಾನ್ಸ್ಟೇಬಲ್ ಗಳಿಗೆ ಮಾತ್ರ ಕೊಟ್ಟಿದ್ದೀರಲ್ಲಾ, ಕೇಸುಗಳನ್ನು ಪತ್ತೆ ಮಾಡಿರುವಂಥ ಆಫೀಸರುಗಳಿಗೇಕೆ ಕೊಟ್ಟಿಲ್ಲ ?

(*No answer.*)

ಶ್ರೀ ಜಿ. ಪುಟ್ಟಸ್ವಾಮಿ.—ಆ ಡಿಸ್ಟ್ರಿಕ್ಟ್ ದಕ್ಷತೆ ಕಡಮೆಯಿದೆಯೆಂದು ಸರ್ಕಾರಕ್ಕೆ ಮೊದಲೇ ಎಚ್ಚರಿಕೆ ಕೊಟ್ಟಿದ್ದಂಥ ಎಷ್ಟು ಜನ ಆಫೀಸರುಗಳನ್ನು ಚಿಕ್ಕಮಗಳೂರು ಜಿಲ್ಲೆಗೆ ಹಾಕಿದ್ದೀರಿ ಎಂಬುದನ್ನು ಹೇಳುತ್ತೀರಾ ?

Sri H. SIDDAVEERAPPA.—The fact that so many cases have been investigated is a matter for compliment by the Hon'ble Member and not for criticism.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯಾರ್ಥಿಗಳು ಈಗ ಕಳ್ಳತನ ಮಾಡಿದ್ದಾರಲ್ಲಾ ಅವರು ಅಮೆರಿಕಾದಲ್ಲಿ ಕಳ್ಳತನ ಮಾಡುತ್ತಿರುವಂಥ ದರೋಡೆ ಕಳ್ಳರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಕೊಟ್ಟು ಕಳ್ಳತನ ಮಾಡಿರುವುದರಿಂದ ದರೋಡೆ ಕಳ್ಳರೆಂದು ಹೇಳಬಹುದು. ಕೋರ್ಟಿನಲ್ಲಿ ಇನ್ನೂ ಕೇಸಿರುವುದರಿಂದ details ಹೇಳುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಳ್ಳತನ ಜಾಸ್ತಿಯಾದಮೇಲೆ ಅವುಗಳನ್ನು ಪತ್ತೆಹಚ್ಚುವುದಕ್ಕೆ ಸ್ಪೆಷಲ್ ಪೋಲೀಸ್‌ರವರನ್ನು ನೇಮಕ ಮಾಡಿದ್ದೀರಾ ?

ಶ್ರೀ ಎಚ್ ಸಿದ್ದವೀರಪ್ಪ.—ಒಂದು ಸ್ಪೆಷಲ್ ಸ್ಕ್ವಾಡನ್ನು organise ಮಾಡಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದಕ್ಕೊಂದು ಸ್ಪೆಷಲ್ ಬ್ರಾಂಚನ್ನು ಏರ್ಪಾಡುಮಾಡಿದರೆ ಅವರು ವಿಶೇಷ ಗಮನ ಕೊಟ್ಟು ಕೇಸುಗಳನ್ನು ಪತ್ತೆ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಪೆಷಲ್ ಪೋಲೀಸಿನವರನ್ನು ಏರ್ಪಾಡು ಮಾಡಿದ್ದಾರಲ್ಲಾ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅವರು ಇತ್ತೀಚೆಗೆ ವಿಶೇಷ ಶ್ರಮದಿಂದ ಅನೇಕ ಕೇಸುಗಳನ್ನು ಪತ್ತೆ ಹಚ್ಚಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ವಿ. ಆರ್. ನಾಯ್ಡು.—ಕಳ್ಳರೂ ಒಂದು ನ್ಯೂಸ್ ಮಾಡಿಕೊಂಡು, ಇಂಥಿಂಥ ಕಳ್ಳತನವನ್ನು ಹೀಗೆಯೇ ಮಾಡಬೇಕೆಂದು ಹೇಳಿಕೊಡುತ್ತಾರೆಂದು ತಿಳಿದುಬಂದಿದೆ. ಅಂಥ ನ್ಯೂಸರುವುದನ್ನೇನಾದರೂ ಪತ್ತೆ ಹಚ್ಚಿದ್ದೀರಾ ?

(*No answer.*)

ಶ್ರೀ ವಿ. ಆರ್. ನಾಯ್ಡು.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳು ತಮ್ಮ ಮುಂದಿನ ಕಾರ್ಯಕ್ರಮವೇನು, ಇಂಥಿಂಥ ಕಡೆಯಲ್ಲೇ ಈ ರೀತಿಯಾಗಿ ಕಳ್ಳತನ ನಡೆಯುತ್ತದೆಂದು ಕಾಗದ ಬರೆದಿರುವುದು ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳನ್ನೆಲ್ಲಾ ನಂಬುವುದಕ್ಕಾಗುವುದಿಲ್ಲ.

12-30 P.M.

"Kurubarahundi", Gundlupet Taluk (change of name).

Q.— 239. **Sri U. M. MADAPPA** (Chamarajanagar).—

Will the Government be pleased to state :—

(*a*) whether the villagers of Kurubarahundi village of Gundlupet Taluk are requesting them to change the name of their village "Kurubarahundi";

(*b*) since when, and the new name the villagers are suggesting;

(*c*) the action taken by them in this behalf ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) 25th June 1955.
Mahadevapura.

(*c*) The subject is under examination.

Sri U. M. MADAPPA.—May I know whether this village is a historical place ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು. ನನಗೆ ಗೊತ್ತಿಲ್ಲ.